**Akashvani : Bangalore**
**National Bulletin In Kannada**
**20.10.2024 / 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**20.10.2024 / 7.35 am**

**<><*<><>*><>**

<u>ಮುಖ್ಯಾಂಶಗಳು</u>

೧. ದಕ್ಷಿಣ ಆಫ್ರಿಕಾದ ಮೂರು ರಾಷ್ಟ್ರಗಳ ಯಶಸ್ವಿ ಭೇಟಿಯ ನಂತರ ಸ್ವದೇಶಕ್ಕೆ ಮರಳಿದ ರಾಷ್ಟ್ರಪತಿ ದ್ರೌಪದಿ ಮುರ್ಮು

೨. ಪ್ರಧಾನಿ ನರೇಂದ್ರ ಮೋದಿ ಅವರಿಂದ ಇಂದು ವರ್ಚುಯೆಲ್ ಮೂಲಕ ಮಧ್ಯಪ್ರದೇಶ, ಛತ್ತೀಸಗಢ ವಿಮಾನ ನಿಲ್ದಾಣಗಳ ಉದ್ಘಾಟನೆ

೩. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಇಂದಿನಿಂದ ಸಿಂಗಾಪುರ, ಆಸ್ಟ್ರೇಲಿಯಾಕ್ಕೆ ಏಳು ದಿನಗಳ ಭೇಟಿ

೪. ಸುಲ್ತಾನ್ ಆಫ್ ಜೋಹರ್ ಕಪ್ ಹಾಕಿ: ಜಪಾನ್ ವಿರುದ್ಧ ಭಾರತಕ್ಕೆ ೪-೨ ಗೋಲುಗಳ ಜಯ

೫. ಟೆಸ್ಟ್ ಕ್ರಿಕೆಟ್; ನ್ಯೂಜಿಲೆಂಡ್‌ಗೆ ೧೦೭ ರನ್‌ಗಳ ಗೆಲುವಿನ ಗುರಿ ನೀಡಿದ ಭಾರತ

**<><*<><>*><>**

ದಕ್ಷಿಣ ಆಫ್ರಿಕಾದ ಮೂರು ರಾಷ್ಟ್ರಗಳಾದ ಅಲ್ಜೀರಿಯಾ, ಮಾರಿಟಾನಿಯಾ ಮತ್ತು ಮಲಾವಿ ಭೇಟಿಯನ್ನು ಪೂರ್ಣಗೊಳಿಸಿದ ನಂತರ ರಾಷ್ಟ್ರಪತಿ ದ್ರೌಪದಿ ಮುರ್ಮು ನವದೆಹಲಿಗೆ ಆಗಮಿಸಿದ್ದಾರೆ. ಈ ಭೇಟಿಯು ಅಲ್ಜೀರಿಯಾ, ಮಾರಿಟಾನಿಯಾ ಮತ್ತು ಮಲಾವಿಯೊಂದಿಗಿನ ಭಾರತದ ಐತಿಹಾಸಿಕ ಸಂಬಂಧಕ್ಕೆ ಹೊಸ ಅಧ್ಯಾಯ ಬರೆದಿದೆ. ಭಾರತದ ಜಿ-೨೦ ಅಧ್ಯಕ್ಷತೆಯ ಅವಧಿಯಲ್ಲಿ ಆಫ್ರಿಕನ್ ಒಕ್ಕೂಟನ್ನು ಉ೨೦ ಯ ಖಾಯಂ ಸದಸ್ಯರನ್ನಾಗಿ ಮಾಡಿದ ಒಂದು ವರ್ಷದ ನಂತರ ರಾಷ್ಟ್ರಪತಿಗಳು ದಕ್ಷಿಣ ಆಫ್ರಿಕಾದ ಮೂರು ರಾಷ್ಟ್ರಗಳಿಗೆ ಭೇಟಿ ನೀಡಿದ್ದಾರೆ. ಒಂದು ವಾರದ ಭೇಟಿಯಲ್ಲಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಎಲ್ಲಾ ಮೂರು ದೇಶಗಳ ನಾಯಕತ್ವದೊಂದಿಗೆ ದ್ವಿಪಕ್ಷೀಯ ಸಭೆಗಳನ್ನು ನಡೆಸಿದರು ಮತ್ತು

ಭಾರತೀಯ ಸಮುದಾಯದೊಂದಿಗೆ ಸಂವಾದ ನಡೆಸಿದರು. ಈ ಭೇಟಿಯು ಆಫ್ರಿಕಾದ ದೇಶಗಳೊಂದಿಗೆ ತನ್ನ ಅಸ್ತಿತ್ವದಲ್ಲಿರುವ ಸೌಹಾರ್ದ ಸಂಬಂಧವನ್ನು ಮತ್ತಷ್ಟು ಬಲಪಡಿಸುವ ಭಾರತದ ಬಲವಾದ ಬದ್ಧತೆಯನ್ನು ಪುನರುಚ್ಚರಿಸಿದೆ. ಮಲಾವಿಯಲ್ಲಿ ನಿನ್ನೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಆತ್ಮೀಯವಾಗಿ ಬೀಳ್ಕೊಡಲಾಯಿತು. ಈ ಸಂದರ್ಭದಲ್ಲಿ ಮಲಾವಿ ಉಪಾಧ್ಯಕ್ಷ ಮತ್ತು ಇತರೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

<><*<><>*><>

ಮಧ್ಯಪ್ರದೇಶದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ರೇವಾ ವಿಮಾನ ನಿಲ್ದಾಣ ಹಾಗೂ ಛತ್ತೀಸ್‌ಗಢದ ಅಂಬಿಕಾಪುರದ ಮಾ ಮಹಾಮಾಯಾ ವಿಮಾನ ನಿಲ್ದಾಣವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಇಂದು ವರ್ಚುಯೆಲ್ ಮೂಲಕ ಉದ್ಘಾಟಿಸಲಿದ್ದಾರೆ. ಮಧ್ಯಪ್ರದೇಶದ ಭೋಪಾಲ್, ಜಬಲ್ಪುರ್, ಖಜುರಾಹೊ, ಇಂದೋರ್ ಮತ್ತು ಗ್ವಾಲಿಯರ್ ನಂತರ ರೇವಾ, ರಾಜ್ಯದ ೬ನೇ ವಿಮಾನ ನಿಲ್ದಾಣವಾಗಿದೆ. ೪೫೦ ಕೋಟಿ ರೂಪಾಯಿ ವೆಚ್ಚದಲ್ಲಿ ರೇವಾ ವಿಮಾನ ನಿಲ್ದಾಣ ನಿರ್ಮಿಸಲಾಗಿದೆ. ೧೦೨ ಹೆಕ್ಟೇರ್ ಭೂಮಿಯಲ್ಲಿ ನಿರ್ಮಿಸಲಾದ ಈ ವಿಮಾನ ನಿಲ್ದಾಣವು ೫೦ ವರ್ಷಗಳ ಅಗತ್ಯತೆಗಳಿಗೆ ಅನುಗುಣವಾಗಿದೆ. ಇದರ ರನ್ ವೇ ೩೦ ಮೀಟರ್ ಅಗಲ ಮತ್ತು ೮೦೦ ಮೀಟರ್ ಉದ್ದವಿದೆ. ಂಖಿಖ-೭೨ ನಂತಹ ವಿಮಾನಗಳನ್ನು ಈ ವಿಮಾನ ನಿಲ್ದಾಣದಿಂದ ನಿರ್ವಹಿಸಬಹುದು. ರೇವಾ ವಿಮಾನ ನಿಲ್ದಾಣದಲ್ಲಿ ವಿಮಾನ ಹಾರಾಟ ಆರಂಭಗೊಂಡರೆ, ರಾಜ್ಯದ ೬೫ ಲಕ್ಷಕ್ಕೂ ಹೆಚ್ಚು ಜನರಿಗೆ ಅನುಕೂಲವಾಗಲಿದೆ. ಇದು ರೇವಾ ಪ್ರದೇಶದಲ್ಲಿ ಪ್ರವಾಸೋದ್ಯಮದೊಂದಿಗೆ ಹೂಡಿಕೆಯನ್ನು ಉತ್ತೇಜಿಸುತ್ತದೆ.  ಛತ್ತೀಸ್‌ಗಢದ ಬುಡಕಟ್ಟು ಜನಾಂಗದ ಪ್ರಾಬಲ್ಯದ ಸುರ್ಗುಜಾ ಪ್ರದೇಶದಲ್ಲಿ ನೆಲೆಗೊಂಡಿರುವ ಮಾ ಮಹಾಮಾಯಾ ವಿಮಾನ ನಿಲ್ದಾಣ ಆರಂಭದಿಂದ ಸ್ಥಳೀಯ ಜನತೆಯ ಬಹುಕಾಲದ ಬೇಡಿಕೆ ಈಡೇರಿದೆ. ಸುರ್ಗುಜಾ ವಿಭಾಗದಲ್ಲಿ ಸುಧಾರಿತ ಸಾರಿಗೆ ಸೌಲಭ್ಯಗಳು, ವಾಣಿಜ್ಯ ಚಟುವಟಿಕೆಗಳು, ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ ಮತ್ತು ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ.

<><*<><>*><>

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಸಿಂಗಾಪುರ ಮತ್ತು ಆಸ್ಟ್ರೇಲಿಯಾಕ್ಕೆ ಇಂದಿನಿಂದ ಏಳು ದಿನಗಳ ಭೇಟಿ ನೀಡಲಿದ್ದಾರೆ. ಈ ಭೇಟಿಯು ಶಿಕ್ಷಣದಲ್ಲಿ ಪರಸ್ಪರ ಹಿತಾಸಕ್ತಿಯ ನಿರ್ಣಾಯಕ ಕ್ಷೇತ್ರಗಳಲ್ಲಿ ಸಹಯೋಗ ಮತ್ತು ಭಾಗವಹಿಸುವಿಕೆ ಉತ್ತೇಜಿಸುವ ನಿರೀಕ್ಷೆಯಿದೆ. ಸಿಂಗಾಪುರಕ್ಕೆ ತಮ್ಮ

ಎರಡು ದಿನಗಳ ಭೇಟಿಯ ಮೊದಲ ಹಂತದಲ್ಲಿ, ಧರ್ಮೇಂದ್ರ ಪ್ರಧಾನ್ ಇಂದು ಭಾರತೀಯ ಸಮುದಾಯದ ಸದಸ್ಯರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ನಾಳೆ ಅವರು ಸಿಂಗಾಪುರದ ಪ್ರಧಾನಿ ಲಾರೆನ್ಸ್ ವಾಂಗ್, ಉಪ ಪ್ರಧಾನಿ ಗಾನ್ ಕಿಮ್ ಯೋಂಗ್ ಮತ್ತು ಇತರೆ ಹಿರಿಯ ನಾಯಕರನ್ನು ಭೇಟಿಯಾಗಲಿದ್ದಾರೆ. ಮೂರು ದಿನಗಳ ಆಸ್ಟ್ರೇಲಿಯಾ ಪ್ರವಾಸದಲ್ಲಿ ಧರ್ಮೇಂದ್ರ ಪ್ರಧಾನ್, ಇದೇ ೧೩ ರಂದು ಆಸ್ಟ್ರೇಲಿಯಾ ಶಿಕ್ಷಣ ಸಚಿವ ಜೇಸನ್ ಕ್ಲೇರ್ ಅವರನ್ನು ಭೇಟಿಯಾಗಲಿದ್ದಾರೆ. ಬಳಿಕ ಅವರು ಆಸ್ಟ್ರೇಲಿಯ ಅಂತಾರಾಷ್ಟ್ರೀಯ ಶಿಕ್ಷಣ ಸಮಾವೇಶ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಇದೇ ೧೪ ರಂದು ಅವರು, ಸಿಡ್ನಿಯಲ್ಲಿರುವ ಅಬರ್ನ್ ಲಾಂಗ್ ಡೇ ಮಕ್ಕಳ ಪಾಲನಾ ಕೇಂದ್ರಕ್ಕೆ ಭೇಟಿ ನೀಡಲಿದ್ದಾರೆ. ಬಳಿಕ ನವೀನ ಸಂಶೋಧನಾ ವಿಶ್ವವಿದ್ಯಾನಿಲಯಗಳ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಅಲ್ಲದೇ, ಎರಡನೇ ಆಸ್ಟ್ರೇಲಿಯಾ ಇಂಡಿಯಾ ಶಿಕ್ಷಣ ಮತ್ತು ಕೌಶಲ್ಯ ಮಂಡಳಿಯಲ್ಲಿ ಭಾಗವಹಿಸಲಿದ್ದಾರೆ. ಇದೇ ೧೫ರಂದು ಧರ್ಮೇಂದ್ರ ಪ್ರಧಾನ್, ಗ್ರ್ಯಾನ್ವಿಲ್ಲೆ ಸೌತ್ ಕ್ರಿಯೇಟಿವ್ ಆಂಡ್ ಪರ್ಫಾರ್ಮಿಂಗ್ ಆರ್ಟ್ಸ್ ಹೈಸ್ಕೂಲ್ ಮತ್ತು ಮ್ಯಾಕ್ವಾರಿ ಪಾರ್ಕ್ ಇನ್ನೋವೇಶನ್ ಡಿಸ್ಟ್ರಿಕ್‌ಗೆ ಭೇಟಿ ನೀಡಲಿದ್ದಾರೆ.

<><*<><>*><>

ಭಾರತ ಮತ್ತು ಮೆಕ್ಸಿಕೋ ಜಂಟಿ ಪ್ರಯತ್ನಗಳ ಮೂಲಕ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸಬಹುದಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಭಾರತ-ಮೆಕ್ಸಿಕೋ, ವ್ಯಾಪಾರ ಮತ್ತು ಹೂಡಿಕೆ ಶೃಂಗಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ವೈವಿಧ್ಯತೆಯ ಅದರಲ್ಲೂ ಅರೆವಾಹಕಗಳು, ಸರ್ಕ್ಯೂಟ್‌ಬೋರ್ಡ್‌ಗಳು ಮತ್ತು ಇತರ ಎಲೆಕ್ಟ್ರಾನಿಕ್ ಸಾಧನಗಳಲ್ಲಿ ಸ್ಥಿತಿಸ್ಥಾಪಕತ್ವ ಅಗತ್ಯ ಎಂದು ಪ್ರತಿಪಾದಿಸಿದರು. ಉಭಯ ದೇಶಗಳು ಆರ್ಥಿಕ ಸಹಕಾರ ವೃದ್ಧಿಗೆ ವಿಪುಲ ಅವಕಾಶಗಳನ್ನು ಹೊಂದಿದ್ದು, ಔಷಧ, ತಯಾರಿಕೆ ಮತ್ತು ವಾಹನ ವಲಯಗಳಲ್ಲಿ ಬೆಳವಣಿಗೆ ಮತ್ತು ಹೂಡಿಕೆಗೆ ಅಪಾರ ಅವಕಾಶವಿದೆ ಎಂದು ಅವರು ಹೇಳಿದರು. ಫಿನ್‌ಟೆಕ್ ಮತ್ತು ಡಿಜಿಟಲ್ ಪಾವತಿಗಳಲ್ಲಿ ಗಡಿಯಾಚೆಗಿನ ಸಹಕಾರ ಮತ್ತು ನಾವಿನ್ಯತೆಗೆ ಎರಡು ದೇಶಗಳ ಪಾಲುದಾರಿಕೆಯು ಉತ್ತಮ ವೇದಿಕೆ ಒದಗಿಸಬಹುದಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಮತ್ತೊಂದು ಕಾರ್ಯಕ್ರಮದಲ್ಲಿ ಮೆಕ್ಸಿಕೋದ ಹಣಕಾಸು ಕಾರ್ಯದರ್ಶಿ ಅವರನ್ನು ನಿರ್ಮಲಾ ಸೀತಾರಾಮನ್ ಭೇಟಿ ಮಾಡಿ ಸಹಯೋಗ ಆಧಾರಿತ ಡಿಜಿಟಲ್ ಪರಿವರ್ತನೆಯ ಅನ್ವೇಷಣೆಗೆ ಭಾರತದ ಆಸಕ್ತಿಯನ್ನು ವ್ಯಕ್ತಪಡಿಸಿದರು.

<><*<><>*><>

ಕೇಂದ್ರ ಸರ್ಕಾರದಿಂದ ಅನುಮೋದಿಸಲಾದ ೧೩ ಹೊಸ ತಳಿಯ ಗೋಧಿ ಬೀಜಗಳ ವಿತರಣೆಯನ್ನು ನಿನ್ನೆ ಕರ್ನಾಲ್ ಭಾರತೀಯ ಗೋಧಿ ಮತ್ತು ಬಾರ್ಲಿ ಸಂಶೋಧನಾ ಕೇಂದ್ರ ಪ್ರಾರಂಭಿಸಿದೆ. ಹೊಸ ತಳಿಗಳ ಬೀಜಗಳನ್ನು ಪಡೆಯಲು ದೇಶಾದ್ಯಂತದ ೨೨ ಸಾವಿರ ರೈತರು ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡಿದ್ದಾರೆ. ಹೊಸ ತಳಿಯ ಗೋಧಿ ಹೆಚ್ಚು ಇಳುವರಿ ನೀಡುವುದರ ಜೊತೆಗೆ ರೋಗ ನಿರೋಧಕ ಶಕ್ತಿ ಹೊಂದಿದೆ. ಸಿಪ್ಪೆ ಮುಕ್ತ ಮತ್ತು ಪಶು ಆಹಾರಕ್ಕಾಗಿ ಒಣಹುಲ್ಲನ್ನು ಒದಗಿಸುವ ಡಿಡಬ್ಲ್ಯು ಆರ್‌ವಿ-೧೩೭ ಬಾರ್ಲಿ ತಳಿಯು ಗೋಧಿಯ ಅನುಮೋದಿತ ಪ್ರಭೇದಗಳಲ್ಲಿ ಸೇರಿದೆ. ಈ ಬಾರಿ ಸಂಸ್ಥೆಯು ೧೧೫ ದಶಲಕ್ಷ ಟನ್ ಗೋಧಿ ಉತ್ಪಾದಿಸುವ ಗುರಿಯನ್ನು ಹೊಂದಿದೆ. ಕಳೆದ ವರ್ಷ ದಾಖಲೆಯ ೧೧೩.೨೯ ದಶಲಕ್ಷ ಟನ್ ಗೋಧಿ ಬೆಳೆಯಲಾಗಿತ್ತು ಎಂದು ಸಂಸ್ಥೆಯ ನಿರ್ದೇಶಕ ಡಾ.ರತನ್ ತಿವಾರಿ ಹೇಳಿದ್ದಾರೆ.

<><*<><>*><>

ಸದೃಢ ರಕ್ಷಣಾ ವ್ಯವಸ್ಥೆಯನ್ನು ಪೋಷಿಸಲು ಆಧುನಿಕ ತಂತ್ರಜ್ಞಾನಗಳ ಬಳಕೆಗೆ ಹೂಡಿಕೆ ಮಾಡುತ್ತಾ ಸರ್ಕಾರ, ಸಶಸ್ತ್ರಪಡೆಗಳು ಹೊರಹೊಮ್ಮುತ್ತಿರುವ ತಂತ್ರಜ್ಞಾನ ಯುಗದಲ್ಲಿ ಭವಿಷ್ಯಕ್ಕೆ ಸಿದ್ಧರಾಗುವುದನ್ನು ಖಾತರಿಪಡಿಸಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ೬೨ನೇ ರಾಷ್ಟ್ರೀಯ ರಕ್ಷಣಾ ಕಾಲೇಜಿನ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತದ ಯುದ್ಧವು ಭೂಮಿ, ಸಾಗರ ಮತ್ತು ಆಕಾಶ ಎಂಬ ಸಾಂಪ್ರದಾಯಿಕ ಯುದ್ಧಮಾರ್ಗಗಳನ್ನು ಮೀರಿದ್ದು, ಕೃತಕಬುದ್ಧಿಮತ್ತೆಯು ಸಶಸ್ತ್ರ ಪಡೆಗಳಲ್ಲಿ ಕ್ರಾಂತಿ ತರಬಲ್ಲ ಸಾಮರ್ಥ್ಯ ಹೊಂದಿವೆ ಎಂದರು.  ಈ ತರಬೇತಿಯು ಬುದ್ಧಿಯನ್ನು ಚುರುಕುಗೊಳಿಸಿದೆ ಮತ್ತು ಕೌಶಲ್ಯವನ್ನು ವೃದ್ಧಿಸಿದೆ. ರಕ್ಷಣಾ ಸಿಬ್ಬಂದಿಯ ಶೈಕ್ಷಣಿಕ ಮತ್ತು ತಾಂತ್ರಿಕ ಕಲಿಕೆಯು ಆಧುನಿಕ ಯುಗದಲ್ಲಿ ಮಹತ್ವ ಪಡೆದಿದೆ ಎಂದು ಹೇಳಿದ ರಾಜನಾಥ್ ಸಿಂಗ್, ತರಬೇತಿ ಪಡೆದ ಎಲ್ಲರಿಗೂ ಅಭಿನಂದನೆ ತಿಳಿಸಿದ್ದಾರೆ.

<><*<><>*><>

ಇಸ್ರೇಲ್ ನಡೆಸಿದ ಕಾರ್ಯಾಚರಣೆಯಲ್ಲಿ ಹೆಜ್ಬುಲ್ಲಾದ ಉಪ ಕಮಾಂಡರ್ ನಾಸಿರ್ ಅಬೆದ್ ಅಲ್ ಅಜೀಜ್ ರಶೀದ್‌ನನ್ನು ದಕ್ಷಿಣ ಲೆಬನಾನ್‌ನಲ್ಲಿ ಹತ್ಯೆ ಮಾಡಲಾಗಿದೆ. ಇಸ್ರೇಲ್ ನಾಗರಿಕರ ವಿರುದ್ಧ ರಶೀದ್, ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿದ್ದ ಎನ್ನಲಾಗಿದೆ. ರಶೀದ್ ಹತ್ಯೆ ಕುರಿತು ಹೆಜ್ಬುಲ್ಲಾ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

<><*<><>*><>

ಮಲೇಷ್ಯಾದಲ್ಲಿ ನಡೆಯುತ್ತಿರುವ ಸುಲ್ತಾನ್ ಆಫ್ ಜೋಹರ್ ಕಪ್ ೨೦೨೪ ಹಾಕಿ ಪಂದ್ಯಾವಳಿಯಲ್ಲಿ ಭಾರತೀಯ ಜೂನಿಯರ್ ಪುರುಷರ ತಂಡ ತಮ್ಮ ಮೊದಲ ಪಂದ್ಯದಲ್ಲಿ ಜಪಾನ್ ವಿರುದ್ಧ ೪-೨ ಗೋಲುಗಳ ಜಯದೊಂದಿಗೆ ಶುಭಾರಂಭ ಕಂಡಿದೆ. ಭಾರತದ ಪರ ಅಮೀರ್ ಅಲಿ, ಗುರ್ಜೋತ್ ಸಿಂಗ್, ಆನಂದ್ ಸೌರಭ್ ಕುಶ್ವಾಹಾ ಹಾಗೂ ಅಂಕಿತ್ ಪಾಲ್ ಒಟ್ಟು ೪ ಗೋಲು ಗಳಿಸಿದರು. ಭಾರತೀಯ ಜೂನಿಯರ್ ಪುರುಷರ ತಂಡದ ತರಬೇತುದಾರರಾಗಿ ಯಶಸ್ವಿಯಾಗಿ ಪಾದಾರ್ಪಣೆ ಮಾಡುವ ಮೂಲಕ ತಮ್ಮ ಹಾಕಿ ವೃತ್ತಿಜೀವನದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಿದ ಒಲಿಂಪಿಕ್ಸ್ ಕ್ರೀಡಾಪಟು ಪಿ.ಆರ್. ಶ್ರೀಜೇಶ್ ಅವರಿಗೆ ಈ ಪಂದ್ಯ ಮೈಲಿಗಲ್ಲಾಯಿತು. ಇಂದು ನಡೆಯುವ ಪಂದ್ಯದಲ್ಲಿ ಭಾರತ ತಂಡ, ಬ್ರಿಟನ್ ವಿರುದ್ಧ ಸೆಣಸಲಿದೆ. ಪಂದ್ಯ ಭಾರತೀಯ ಕಾಲಮಾನ ಅಪರಾಹ್ನ ೧.೩೫ಕ್ಕೆ ಆರಂಭವಾಗಲಿದೆ. ನಿನ್ನೆ ನಡೆದ ಪಂದ್ಯದಲ್ಲಿ ಬ್ರಿಟನ್, ಆಸ್ಟ್ರೇಲಿಯಾವನ್ನು ೩-೧ ಗೋಲುಗಳಿಂದ ಸೋಲಿಸಿತು. ೨೦೧೧ ರಿಂದ ನಡೆಯುತ್ತಿರುವ ಸುಲ್ತಾನ್ ಆಫ್ ಜೋಹರ್ ಕಪ್ ನಲ್ಲಿ, ಭಾರತ ಮತ್ತು ಬ್ರಿಟನ್ ಮೂರು ಬಾರಿ ಪ್ರಶಸ್ತಿಯನ್ನು ಗೆದ್ದ ಮೊದಲ ತಂಡಗಳಾಗಿವೆ.

<><*<><>*><>

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಭಾರತ, ಎರಡನೇ ಇನ್ನಿಂಗ್ಸ್‌ನ ನಾಲ್ಕನೇ ದಿನದಾಟದಲ್ಲಿ ನಿನ್ನೆ ಎಲ್ಲಾ ವಿಕೆಟ್ ಕಳೆದುಕೊಂಡು ೪೬೨ ರನ್ ಗಳಿಸಿದ್ದು ಎದುರಾಳಿ ತಂಡಕ್ಕೆ ೧೦೭ ರನ್ ಗಳ ಗೆಲುವಿನ ಗುರಿ ನೀಡಿದೆ. ಮಳೆಯಿಂದಾಗಿ ನಿನ್ನೆಯ ದಿನದಾಟ ಬೇಗ ಕೊನೆಗೊಂಡಿದ್ದು, ನ್ಯೂಜಿಲೆಂಡ್ ಕೇವಲ ನಾಲ್ಕು ಎಸೆತಗಳನ್ನು ಎದುರಿಸಿದೆ. ಭಾರತ ಮೊದಲ ಇನ್ನಿಂಗ್ಸ್ ನಲ್ಲಿ ಕೇವಲ ೪೬ ರನ್ ಗಳಿಸಿದ್ದು, ನ್ಯೂಜಿಲೆಂಡ್ ೪೦೨ ರನ್ ಗಳಿಸಿತ್ತು. ಸರ್ಫರಾಜ್ ಖಾನ್ ಅವರ ಚೊಚ್ಚಲ ಶತಕ ಆತಿಥೇಯ ಭಾರತ ಉತ್ತಮ ಮೊತ್ತ ಕಲೆ ಹಾಕಲು ನೆರವಾಯಿತು. ಇಂದು ಅಂತಿಮ ದಿನದಾಟ ನಡೆಯಲಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಅಪರಾಹ್ನ ೧.೧೦ ಕ್ಕೆ <>*><>